O.S.63/2009

DW-1

ದಿ. 02.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿ ಆದೇಶ ದಿನಾಂಕ 27.03.2025 ರ ಆಧಾರದ ಮೇಲೆ ಮುಂದುವರಿದ ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರಿ.ಎಂಕೆ ರವರಿಂದಃ-**

7. ತುಳಸಮ್ಮರವರು ಯಾವಾಗ ಮರಣ ಹೊಂದಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಸರ್ವೆ ನಂ.112 ರಲ್ಲಿ ತಲಾ 3 ವರೆ ಗುಂಟೆ ಜಮೀನು ನಮ್ಮಗಳ ಹಿಸ್ಸೆಗೆ ಬಂದಿರುತ್ತದೆ. ಸರ್ವೆ ನಂ.103/1 ರಲ್ಲಿ ತಲಾ 22 ವರೆ ಗುಂಟೆ ಜಮೀನು ಬಂದಿರುತ್ತದೆ. ಸರ್ವೆ ನಂ.103/1 ರಲ್ಲಿ ತಲಾ 22 ವರೆ ಗುಂಟೆ ಜಮೀನು ಬಂದಿರುತ್ತದೆ ಎಂದು ತೋರಿಸಲು ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುತ್ತೇನೆ. ವಾದಿಯು ಎಸಿ ನ್ಯಾಯಾಲಯದಲ್ಲಿ ನಮ್ಮಗಳ ಹೆಸರಿಗೆ ಆದಂತಹ ಖಾತೆಗಳ ವಿರುದ್ಧ ಅಪೀಲು ಸಂಖ್ಯೆ 325/2009-2010 ರ ಅಡಿಯಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಅಪೀಲು ವಜಾಗೊಂಡಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಪೀಲು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಬಾಕಿ ಇರುವ ಕಾರಣಕ್ಕೆ ಅಲ್ಲಿ ಇತ್ಯರ್ಥ ಮಾಡಿಕೊಳ್ಳಿ ಎಂದು ವಜಾ ಮಾಡಿರುತ್ತಾರೆ ಎಂದರೆ ಸರಿ.ವಾದಿಯ ತಾತನಾದ ಕಾಡೆಗೌಡ ಮತ್ತು ಅಜ್ಜಿ ಚಾಮಮ್ಮ ಮತ್ತು ಆಕೆಯ ತಾಯಿಯಾದ ಮಾದಮ್ಮರವರು ಈಗ ಮರಣ ಹೊಂದಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕಾಡೆಗೌಡ ಮತ್ತು ಚಾಮಮ್ಮರವರು ಮರಣ ಹೊಂದಿರುವುದು ನಿಜ ಆದರೆ ಮಾದಮ್ಮ ಎನ್ನುವವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ಒಬ್ಬಳೇ ಇರುವ ಕಾರಣ ಆಕೆಗೆ ಆಸ್ತಿಗಳಲ್ಲಿ ಭಾಗ ಕೊಡುವುದು ಬೇಡ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಆಕೆಯ ತಾಯಿ ಮಾದಮ್ಮರವರು ಇರುವಂತಹ ಸಮಯದಲ್ಲಿ ನಾವುಗಳು ಮಾದಮ್ಮರವರ ಮನೆಗೆ

ಹೋಗಿ ಬಂದು ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಮಾದೇಗೌಡ ಮತ್ತು ಚಿಕ್ಕೇಗೌಡರ ಕಾಲಕ್ಕೆ ಪಂಚಾಯತಿಯಲ್ಲಿ ವಾದಿಗೆ ಆಸ್ತಿ ಕೊಡುವಂತೆ ತೀರ್ಮಾನವಾಗಿದ್ದರೂ ನಾವುಗಳು ಅದನ್ನು ತಿರಸ್ಕರಿಸಿ ಪಂಚಾಯತಿಯಿಂದ ಹೋಗಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ನಾವು ಭಾಗಾಂಶ ಕೊಡಲು ತಿರಸ್ಕಾರ ಮಾಡಿದ್ದಕ್ಕಾಗಿಯೇ ವಾದಿ ನಮ್ಮಗಳ ವಿರುದ್ದ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ.

8. ನಿಪಿ-1 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವಂತ ರಾಜೇಶ, ಬಸವೇಗೌಡ, ಹೆಚ್.ಬಿ ಬಸವಲಿಂಗೇಗೌಡ ರವರು ಸಹ ಆ ದಿನ ಪಂಚಾಯತಿಯಲ್ಲಿ ಹಾಜರಿದ್ದರು ಎಂದರೆ ಸರಿಯಲ್ಲ. ಪಂಚಾಯತಿ ಆಗುವಂತಹ ಸಮಯದಲ್ಲಿ ನಾನು ಸಹ ಅಲ್ಲಿ ಹಾಜರಿದ್ದೆ ಎಂದರೆ ಸರಿಯಲ್ಲ. ತೊಳಸಮ್ಮ ಮತ್ತು ಆಕೆಯ ಮೂರು ಜನ ಮಕ್ಕಳು ಸಹ ವಾದಿಗೆ ಆಸ್ತಿಯಲ್ಲಿ ಹಿಸ್ಸೆ ಕೊಡುತ್ತೇವೆ ಎಂದು ಪಂಚಾಯತಿಯಲ್ಲಿ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಕೆಲವೊಂದು ಆಸ್ತಿಗಳನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ವಾದಿ ಯಾರು ಅಂತಲೇ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ನಾನು ವ್ಯವಸಾಯ ಮಾಡುತ್ತೇನೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ

ಓ ಹೇ ಕೇ ಸರಿ ಇದೆ

(ರಾಧಾ ಎಸ್ )

O.S.63/2009

DW-1

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,

ಕನಕಪುರ .